# ಆ ಬೆಟ್ಟದಲ್ಲಿ, ಇಳಿಜಾರಿನಲ್ಲಿ...

ಯುಂಗ್ ಫ್ರೌ, ಐಗರ್, ಮೋಂಕ್ – ಸ್ವಿಟ್ಜರ್ಲೆಂಡ್‌ನ ಈ ಮೂರು ಹಿಮಶಿಖರಗಳಲ್ಲಿನ ತಿರುಗಾಟ ಅಪೂರ್ವ ಅನುಭವವೊಂದನ್ನು ದಯಪಾಲಿಸುತ್ತದೆ. ಎತ್ತರೆತ್ತರದ ಶಿಖರಗಳು, ಹುಲ್ಲುಗಾವಲುಗಳು, ಪ್ರಪಾತಗಳು, ಇವೆಲ್ಲದರ ಸುಂದರ ನೋಟ ನೀಡುವ ರೈಲು ಪ್ರಯಾಣ, ಪ್ರತಿಯೊಂದೂ ವಿಶೇಷವೆನಿಸದೇ ಇರದು.

**■ ಬಿ.ಎಸ್. ಶೈಲಜಾ**

ಪಶ್ಚಿಮಘಟ್ಟಗಳೇ ಆಗಲಿ, ಹಿಮಾಲಯವೇ ಆಗಲಿ, ಆಲ್ಪ್ಸ್ ಶ್ರೇಣಿಯೇ ಆಗಲಿ, ಯಾವುದೇ ಶಿಖರವನ್ನು ಮುಟ್ಟಿ ಬರಬೇಕೆಂದರೆ ಕನಿಷ್ಠ ಎರಡು ಮೂರು ದಿನಗಳಾದರೂ ಬೇಕು. ಆದರೆ ಮೂರೇ ದಿನಗಳಲ್ಲಿ ಮೂರು ಶಿಖರಗಳನ್ನು ಮೆಟ್ಟಿ ಬರಲು ಸಾಧ್ಯವೇ? ಸಾಧ್ಯವಿದೆ. ಎಲ್ಲಿ? ಹೇಗೆ?

ಆಲ್ಪ್ಸ್ ಪರ್ವತಶ್ರೇಣಿಯಲ್ಲಿ ಎತ್ತರದ ಹಿಮಾಚ್ಛಾದಿತ ಶಿಖರಗಳ ಸಾಲು ಸಾಲೇ ಇವೆ. ಅದು ಹಾದು ಹೋಗುವ ಪ್ರತಿ ದೇಶವೂ ಅವುಗಳ ಹಿರಿಮೆಯನ್ನು ಪ್ರವಾಸೋದ್ಯಮಕ್ಕೆ ಚೆನ್ನಾಗಿ ಬಳಸಿಕೊಳ್ಳುತ್ತಿವೆ. ಅವುಗಳಲ್ಲಿ ಒಂದು, ಸ್ವಿಟ್ಜರ್ಲೆಂಡ್‌ನ 'ಯುಂಗ್ ಫ್ರೌ', 'ಐಗರ್' ಮತ್ತು 'ಮೋಂಕ್' ಎಂಬ ಮೂರು ಶಿಖರಗಳು. ಈ ಮೂರನ್ನು ಮುಟ್ಟಿ ಬರುವ ನಮ್ಮ ಯಾತ್ರೆ ಆರಂಭವಾದದ್ದು ಇಂಟರ್ ಲಾಕೆನ್ ಎಂಬ ಪಟ್ಟಣದಿಂದ. ಪ್ರವಾಸಿಗರಿಂದ ಕಿಕ್ಕಿರಿದಿದ್ದ ಈ ಊರಲ್ಲಿರುವ ಬದಲು ನಾವು ಪ್ರಶಾಂತ ಹಳ್ಳಿಯೊಂದನ್ನು ಆರಿಸಿದ್ದೆವು. ಅಲ್ಲಿಗೆ ಒಂದು ಪುಟ್ಟ ರೈಲು ನಮ್ಮನ್ನು ತಲುಪಿಸಿತು.

ಸಣ್ಣ ನದಿಯ ಪಕ್ಕದಲ್ಲಿಯೇ ಸಾಗಿದ ರೈಲಿನ ಆಚೀಚೆ ದೊಡ್ಡ ಮರಗಳ ಕಾಡು. ಲಾಟ್ಬ್ರುನ್ ಬ್ರೂನೆನ್ ನಗರ ಸಮೀಪಿಸುತ್ತಿದ್ದಂತೆ ಅಲ್ಲಿಯ ಮುಖ್ಯ ಆಕರ್ಷಣೆ ಎನಿಸಿದ ಜಲಪಾತ ಕಂಡಿತು. ಆ ಊರಿನಲ್ಲಿ ರೈಲು ಬದಲಿಸಿದೆವು. ಊರನ್ನು ದಾಟಿ ಬೆಟ್ಟ ಹತ್ತಿದ ರೈಲಿನಲ್ಲಿ ವೆಂಗೆನ್ ವಾಲ್ಡ್ ಸ್ಟೇಷನ್‌ನಲ್ಲಿ ಇಳಿದು ಹುಲ್ಲುಹಾಸಿನ ಗುಡ್ಡದ ಹಾದಿಯಲ್ಲಿ ಮನೆ ತಲುಪಿದೆವು.


ಆಗ ಸೂರ್ಯಾಸ್ತದ ಸಮಯ. ದೂರದಲ್ಲಿ ಮೂರು ಶಿಖರಗಳು ಹೊಂಬಣ್ಣ ಹೊದ್ದು ನಮ್ಮನ್ನು ಸ್ವಾಗತಿಸಿದವು. ಕತ್ತಲಾದಂತೆ ನಕ್ಷತ್ರಗಳು ಹಾಜರಾದವು. ಲಾಟ್ಬ್ರುನ್ ಬ್ರೂನೆನ್ ಜಲಪಾತಕ್ಕೆ ಬಣ್ಣಬಣ್ಣದ ಬೆಳಕು ಚೆಲ್ಲಿದ್ದರು. ನಾವು ಅಲ್ಲಿಂದ ಬಂದ ರೈಲು ನಮ್ಮ ಮನೆಯ ಕೆಳಗೇ ಸುರಂಗದಲ್ಲಿ ಅಂತರ್ಧಾನವಾಗಿ ಮತ್ತೊಂದು ಸ್ಟೇಷನ್‌ನಲ್ಲಿ ಪ್ರತ್ಯಕ್ಷವಾಗುವುದು ಕತ್ತಲಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು.

ಬೆಳಿಗ್ಗೆ 5ಕ್ಕೆ ಗಂಟೆಗಳ ನಿನಾದ ನಮ್ಮನ್ನು ಎಚ್ಚರಿಸಿತು. ಬೆಳಿಗ್ಗೆಯೇ ನಮ್ಮ ಯಾತ್ರೆ ಆರಂಭ. ಪುಟ್ಟ ರೈಲು ಹತ್ತಿ ಲಾಟ್ಬ್ರುನ್ ಬ್ರೂನೆನ್ ಸ್ಟೇಷನ್ ತಲುಪಿದೆವು. ಅಲ್ಲಿ ಇನ್ನೊಂದು ಕೇಬಲ್ ರೈಲು ಹತ್ತಿದೆವು. ಹತ್ತೇ ನಿಮಿಷಗಳಲ್ಲಿ ನಮ್ಮನ್ನು ಸುಮಾರು 2000 ಮೀಟರ್ ಹತ್ತಿಸಿಬಿಟ್ಟಿತು. ಬೆಟ್ಟಗಳು ನಮ್ಮನ್ನು ಅಟ್ಟಿಸಿಕೊಂಡು ಬರುವಂತೆ ಕಾಣುವ ಈ ಪ್ರಯಾಣ ಬಹಳ ರೋಮಾಂಚಕ. ನಾವಿಳಿದದ್ದು ಮುರೆ ಎಂಬ ಪುಟ್ಟ ನಗರದಲ್ಲಿ. ಆ ಊರಿನಲ್ಲಿ ನಡೆದುಹೋಗುವುದೇ ಅಪೂರ್ವ ಅನುಭವ.

ಅಲ್ಲಿಂದ ಮೇಲಕ್ಕೆ ಇನ್ನೊಂದು ಕೇಬಲ್ ಕಾರ್. ಇದು ಆ ಕಣಿವೆಯ ವಿಹಂಗಮ ನೋಟ ಒದಗಿಸಿತು. ಅದಿಳಿದ ಸ್ಥಳದ ಎತ್ತರ 2974 ಮೀಟರ್.

ಇಲ್ಲಿನ ಆಕರ್ಷಣೆ, ತಿರುಗುವ ಉಪಾಹಾರ ಮಂದಿರ. ಅಲ್ಲಿಂದ ಸುತ್ತಲೂ ಬೆಟ್ಟಗಳ, ಹಿಮಶಿಖರಗಳ ನೋಟ ದಕ್ಕುತ್ತದೆ. ಮೂರೂ ಎತ್ತರದ ಶಿಖರಗಳು ಅಕ್ಕಪಕ್ಕದಲ್ಲಿಯೇ ಕಾಣುತ್ತವೆ. ಅಲ್ಲಿನ ಹಿಮನದಿಗಳು ಕರಗಲೊಲ್ಲದೆ ಗಟ್ಟಿಯಾಗಿಯೇ ಬಂಡೆಗಳಂತೆ ಕಾಣುತ್ತಿದ್ದವು. ಪುನಃ ಅದೇ ದಾರಿಯಲ್ಲಿ ಇಳಿದು ಬರುವಾಗ ಮುರೆ ಪಟ್ಟಣದ ರಸ್ತೆಯಲ್ಲಿ ಅಡ್ಡಾಡಿದೆವು. ವಿಶೇಷ ಸ್ಥಳೀಯ ಹಣ್ಣುಗಳ ರುಚಿ ನೋಡಿದೆವು. ವಿಚಿತ್ರ ರುಚಿಯ ಕಾಫಿ ಸೇವಿಸಿದೆವು. ಅಲ್ಲೊಂದು ಕಾಫೀ ಕೇಂದ್ರದಲ್ಲಿ ಶುಭಾಶಯಗಳನ್ನು ಬರೆಯಲು ಫಲಕ ಮತ್ತು ಪೆನ್ನು ಇಟ್ಟಿದ್ದರು. ದೇಶ ವಿದೇಶಿ ಪ್ರವಾಸಿಗರು ತಮ್ಮ ತಮ್ಮ ಭಾಷೆಗಳಲ್ಲಿ ಶುಭಾಶಯ ಸಂದೇಶ ಬರೆದಿದ್ದರು. ನಾನೂ ಕನ್ನಡದಲ್ಲಿ ಬರೆದೆ.





2100 ಮೀಟರ್ ಎತ್ತರದಲ್ಲಿರುವ ರೈಲು ನಿಲ್ದಾಣ